**ಪಾಠ-13** **ಮಾರ್ಚ್ 19-25**

# ಸಹೋದರರ ಸ್ನೇಹವು ನೆಲೆಯಾಗಿರಲಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಇಬ್ರಿಯ 13, ರೋಮ 12:15, ರೋಮ 12:13, ಎಫೆಸ 5:3-5 ಮತ್ತು 1 ಪೇತ್ರ 5:1-4, ಇಬ್ರಿ 2:9, ಇಬ್ರಿಯ 4:16, ಗಲಾತ್ಯ 2:20.

**ಸ್ಮರಣವಾಕ್ಯ : "ಸಹೋದರ ಸ್ನೇಹವು ನೆಲೆಯಾಗಿರಲಿ"** (ಇಬ್ರಿಯ 13:1).

ಇಬ್ರಿಯ 13ನೇ ಅಧ್ಯಾಯವು ಅಪೋಸ್ತಲನ ಮುಕ್ತಾಯದ ಎಚ್ಚರಿಕೆಯನ್ನು ಸಾದರಪಡಿಸುತ್ತದೆ. ಸಹೋದರ ಸ್ನೇಹವು ನೆಲೆಯಾಗಿರಲಿ. ಈ ಪತ್ರಿಕೆಯಾದ್ಯಂತ ನಾವು ರಾಜವಂಶೀಯಯಾಜಕ ಯೇಸುವಿನ ಸೋದರ ಸೋದರಿಯರೆಂದು ಪೌಲನು ಒತ್ತಿ ಹೇಳಿದ್ದಾನೆ. ಇದರ ಬರಹಗಾರನು ವಿಶ್ವಾಸಿಗಳನ್ನು ವೈಯಕ್ತಿಕವಾಗಿ ಪ್ರತಿಯೊಬ್ಬರೂ ಯೇಸುವಿನ ಜೊತೆ ತಮ್ಮ ರಕ್ಷಣೆಗಾಗಿ ದುಡಿಯುತ್ತಿರುವವರ ಸಮೂಹವೆಂದು ಎಣಿಸದೆ ಒಂದೇ ಮನೆಯ ಒಂದೇ ಕುಟುಂಬವರು, ಒಟ್ಟಾಗಿ ರಕ್ಷಣೆ ಹೊಂದಿದವರೆಂದು ಬಗೆಯುತ್ತಾನೆ. ಯೇಸುವು ನಮಗಾಗಿ ಮಾಡುತ್ತಿರುವ ಕೆಲಸವನ್ನು "ಸಹೋದರ ಸ್ನೇಹ"ವೆಂದು ಪೌಲನು ವರ್ಣಿಸುತ್ತಾನೆ: ಆತನು ನಮ್ಮನ್ನು ತನ್ನ ಸಹೋದರೆಂದು ಹೇಳುವುದಕ್ಕೆ ನಾಚಿಕೊಳ್ಳಲಿಲ್ಲವೆಂಬುದಾಗಿ ಇಬ್ರಿಯ 2:11ರಲ್ಲಿ ಹೇಳುತ್ತಾನೆ. ಹಾಗಾಗಿ ಯೇಸುವು ಅವರಿಗೆ ಏನು ಮಾಡಿದನೋ ಅದನ್ನೇ ವಿಶ್ವಾಸಿಗಳು ಒಬ್ಬರಿಗೊಬ್ಬರು ಮಾಡುವವರಾಗಿರಬೇಕು.

ಪತ್ರಿಕೆಯಾದ್ಯಂತ ಒಬ್ಬರಿಗೊಬ್ಬರು ಎಚ್ಚರಪಡಿಸುತ್ತಾ ಯಾರು ಪಾಪದಲ್ಲಿ

* **ಈ ಪಾಠವನ್ನು ಮಾರ್ಚ್ 26ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಬೀಳಬಾರದು ದೇವರ ಕೃಪೆಗೆ ಅಪಾತ್ರರಾಗಬಾರದು ಎಂಬ ಎಚ್ಚರಿಕೆಯು ಸಹೋದರರ ಸ್ನೇಹದಲ್ಲಿ ಅಡಕವಾಗಿದೆ (ಇಬ್ರಿಯ 3:13, ಇಬ್ರಿಯ 10:24,25 ಮತ್ತು ಇಬ್ರಿಯ 12:15–17). 13ನೇ ಅಧ್ಯಾಯುವು ಅತಿಥಿ ಸತ್ಕಾರ (ಇಬ್ರಿಯು 13:2), ಸೆರೆಯಲ್ಲಿರುವವರನ್ನು ಸಂಧ್ಹಿಸುವುದು, ಅವಮಾನಕ್ಕೆ ಗುರಿಯಾದವರನ್ನು ಸಂಧಿಸುವುದು (ಇಬ್ರಿಯ 13:3) ದಾಂಪತ್ಯವನ್ನು ಮಾನ್ಯ ಮಾಡುವುದು (ಇಬ್ರಿಯ 13:4), ದ್ರವ್ಯಾಶೆಯನ್ನು ಬಿಟ್ಟು ಬಿಡುವುದು (ಇಬ್ರಿಯ 13:5,6) ಸಭಾನಾಯಕರನ್ನು ಜ್ಞಾಪಕ ಮಾಡಿಕೊಂಡು ಅವರಿಗೆ ವಿಧೇಯರಾಗುವುದು (ಇಬ್ರಿಯ 13:7–17) ಮತ್ತು ಈ ಪತ್ರಿಕೆಯನ್ನು ಬರೆದವರು ತಮಗೋಸ್ಕರ ಪ್ರಾರ್ಥನೆಯನ್ನು ಮಾಡಬೇಕೆಂದು ಕೇಳಿಕೊಳ್ಳುವುದು (ಇಬ್ರಿಯ 13:18,19).

**ಭಾನುವಾರ** **ಮಾರ್ಚ್ 20**

## ದೇವಜನರನ್ನು ಆದರಿಸುವುದು

ಇಬ್ರಿಯ 13:1,2, ರೋಮ 12:13, 1 ತಿಮೊಥೆ 3:2, ತೀತ 1:8 ಮತ್ತು 1 ಪೇತ್ರ 4:9 ವಚನಗಳನ್ನು ಓದಿರಿ. ಆರಂಭದ ದಿನಗಳಲ್ಲಿ ಇದ್ದ ಸಭೆಯಲ್ಲಿ ಸತ್ಕಾರವು ಯಾವ ಪಾತ್ರವನ್ನು ವಹಿಸಿತ್ತು?

ಕ್ರೈಸ್ತತ್ವವು ಒಂದು ಅಲೆದಾಟದ ಚಳುವಳಿಯಂತೆ ಅದು ಕ್ರೈಸ್ತರ ಮತ್ತು ಕ್ರೈಸ್ತರಲ್ಲದವರ ಸತ್ಕಾರದ ಮೇಲೆ ಆತುಕೊಂಡಿದೆ. ಅತಿಥಿ ಸತ್ಕಾರವನ್ನು ಮರೆಯಬೇಡಿರಿ ಎಂಬುದು ಕೇವಲ ಒಬ್ಬ ವ್ಯಕ್ತಿಯನ್ನು ಉಪಚರಿಸುವುದಕ್ಕೆ ವಿಫಲವಾದಾಗ ಹೇಳುವ ಮಾತಲ್ಲ. ಆದರೆ ಬೇಕೆಂದು ವ್ಯಕ್ತಿಯನ್ನು ಉಪೇಕ್ಷೆ ಮಾಡುವುದನ್ನು ಕುರಿತು ಹೇಳುತ್ತದೆ.

ಪೌಲನು ಸತ್ಕಾರ ಮಾಡುವ ವಿಷಯದಲ್ಲಿ ಕೇವಲ ತಮ್ಮ ಸಹ ವಿಶ್ವಾಸಿಗಳನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿಲ್ಲ. ತನ್ನ ಓದುಗರು ಅನ್ಯರನ್ನೂ ಸಹಾ ಸತ್ಕರಿಸುವವರಾಗಿರಬೇಕು. ಹಾಗೆ ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನೇ ಸತ್ಕರಿಸಿದ್ದಾರೆ ಎಂದು ಹೇಳುತ್ತಾನೆ (ಇಬ್ರಿಯ 13:2). ಬಹುಶಃ ಪೌಲನ ಮನಸ್ಸಿನಲ್ಲಿ ಅಬ್ರಹಾಮ ಮತ್ತು ಸಾರಳನ್ನು ಭೇಟಿಯಾದ ಮೂವರು ಮನುಷ್ಯರು ಇದ್ದಿರಬಹುದು (ಆ.ಕಾಂಡ 18:2–15). ಇತರರಿಗೆ ಸತ್ಕಾರ ತೋರಿಸುವಾಗ ನಾವು ನಮ್ಮಲ್ಲಿರುವುದನ್ನು

ಅವರ ಜೊತೆ ಹಂಚಿಕೊಳ್ಳುವುದನ್ನೂ ಅವರ ಕಷ್ಟಗಳಲ್ಲಿ ಪಾಲುಗಾರರಾಗುವುದನ್ನೂ ಸೂಚಿಸುತ್ತದೆ. ಅದನ್ನು ತಾನೆ ಯೇಸುವು ನಮಗೆ ಮಾಡಿದನು (ಇಬ್ರಿಯ 2:10,18).

ಸೆರೆಯವರಿಗೆ ನಾವು ತೋರಿಸುವ ಸಹೋದರ ಸ್ನೇಹವು ಅವರನ್ನು ನಮ್ಮ ಪ್ರಾರ್ಥನೆಗಳಲ್ಲಿ ಜ್ಞಾಪಕ ಮಾಡಿಕೊಳ್ಳುವುದು ಮಾತ್ರವಲ್ಲ ಅವರಿಗೆ ಅಗತ್ಯವಾದ ಭೌತಿಕ ಮತ್ತು ಭಾವನಾತ್ಮಕ ಸಹಾಯವನ್ನು ಮಾಡುವುದೇ ಆಗಿದೆ. ಸೆರೆಯಾದವರನ್ನು ಬೇಕೆಂತಲೇ ಮರೆಯುವ ಸಾಧ್ಯತೆಗಳು ಹೆಚ್ಚಾಗಿರುತ್ತಿತ್ತು. ಯಾರು ಸೆರೆಯಾದವರಿಗೆ ಸಮಾಜದಲ್ಲಿ ತಿರಸ್ಕಾರಕ್ಕೆ ಒಳಗಾದವರಿಗೆ ಭೌತಿಕ ವಸ್ತುಗಳನ್ನು ಕೊಟ್ಟು ಭಾವನಾತ್ಮಕವಾಗಿ ಸ್ಪಂದಿಸುತ್ತಿದ್ದರೋ ಅವರು ತಮ್ಮನ್ನು ಅವರೊಂದಿಗೆ ಗುರುತಿಸಿಕೊಳ್ಳುತ್ತಿದ್ದರು. ಒಂದು ಅರ್ಥದಲ್ಲಿ ಅಂಥವರ ನಿಂದೆ ಅಪಮಾನದಲ್ಲಿ ಪಾಲುಗಾರರಾಗಿ ತಮ್ಮನ್ನೂ ಸಹಾ ಸಮಾಜದ ತಿರಸ್ಕಾರಕ್ಕೆ ಈಡು ಮಾಡಿಕೊಳ್ಳುವುದೇ ಆಗಿದೆ (ಇಬ್ರಿಯ 10:32–34).

ಸೆರೆಯವರಿಗೆ ಸಂಬಂಧಪಟ್ಟ ಹಾಗೆ ಪೌಲನು ಅವರನ್ನು ಧೈರ್ಯ ಪಡಿಸುವುದಕ್ಕೋಸ್ಕರ ಕೆಲವು ಮಾದರಿಗಳನ್ನು (ಉದಾಹರಣೆಗಳನ್ನು) ಮತ್ತು ಭಾಷಾ ಶೈಲಿಯಿಂದ ಎಚ್ಚರಿಸುತ್ತಾನೆ.

ಮೊದಲನೆಯದಾಗಿ ಆತನು ತನ್ನ ಪತ್ರಿಕೆಯ ಓದುಗರು ತಮ್ಮ ಬೆಂಬಲವನ್ನು ಆಗಲೇ ಸೆರೆಯಾದ ಸಹೋದರ ಮೇಲೆ ತೋರುವಂತೆ ಪ್ರೇರಿಸುತ್ತಾನೆ. ಸಾರ್ವಜನಿಕವಾಗಿ ನಿಂದೆ ಅಪಮಾನಗಳಿಗೆ ಗುರಿಯಾಗಿವರಿಗೆ ಜೊತೆಗಾರರಾದರು ಅಥವಾ ಸಂಗಾತಿಗಳಾದರು (ಇಬ್ರಿಯ 10:33). ಎರಡನೆಯದಾಗಿ ಅಯೋಗ್ಯವಾಗಿ ನಡೆಸುಕೊಂಡವರ ವಿಷಯದಲ್ಲಿ ಬಳಸಿರುವ ಭಾಷೆಯು ಮೋಶೆಯ ಉದಾಹರಣೆಯನ್ನು ಪ್ರತಿಧ್ವನಿಸುತ್ತದೆ, ಆತನು ಐಗುಪ್ತದ ಪಾಪ ಸುಖಭೋಗಗಳನ್ನು ಅನುಭವಿಸುವ ಬದಲು ದೇವಜನರು ಪಡುವ ಕಷ್ಟಸಂಕಟಗಳನ್ನು ಅನುಭವಿಸಲು ಸಿದ್ಧವಾದನು (ಇಬ್ರಿಯ 11:25). ಅಂತಿಮವಾಗಿ ಸಹೋದರ ಪ್ರೀತಿಗೆ ಮಾದರಿ ಎನಿಸುವಂಥದ್ದನು ಪೌಲನು ಸೆರೆಹಿಡಿಯುತ್ತಾನೆ. ಅವರೂ ಸಹಾ ದೇಹದಲ್ಲಿರುವ ಅಂಗಗಳಾಗಿದ್ದಾರೆಯೆಂದು ಓದುಗರಿಗೆ ಜ್ಞಾಪಕಪಡಿಸುತ್ತಾನೆ (ಇಬ್ರಿಯ 13:3). ಅವರೂ ಸಹಾ ಅಂಥದ್ದೇ ಸನ್ನಿವೇಶದಲ್ಲಿ ಸಿಲುಕಿದ್ದಾರೆಂಬ ಭಾವನೆಯಿಂದ ಅಂತಹ ಸಂದರ್ಭದಲ್ಲಿ ಇತರರು ತಮ್ಮನ್ನು ಹೇಗೆ ಆದರಿಸಬೇಕೆಂದು ಇಷ್ಟಪಡುತ್ತಾರೋ

ಹಾಗೆಯೇ ಅಂತಹ ಪರಿಸ್ಥಿತಿಯಲ್ಲಿ ನಿಜವಾಗಿಯೂ ಸಿಲುಕಿರುವವರನ್ನು ಆದರಿಸಬೇಕೆಂದು ಹೇಳುತ್ತಾನೆ. ಸೆರೆಯಾದವರ ಪರಿಸ್ಥಿತಿಯನ್ನು ಕುರಿತು ಇಲ್ಲಿ ಮಾತಾಡುತ್ತಿದ್ದಾನೆ. ವಿಶ್ವಾಸಿಗಳು ಸೆರೆಯಾದವರಿಗೆ ಅಗತ್ಯವಾದ ಪದಾರ್ಥಗಳನ್ನು ಭಾವನಾತ್ಮಕ ಒತ್ತಾಸೆಯನ್ನು ಕೊಡುವುದರಿಂದ ಅವರು ಎಂದಿಗೂ ತಮ್ಮನ್ನು ಪರಿತ್ಯಕ್ತರು ಎಂದು ಭಾವಿಸಿಕೊಳ್ಳುವುದಿಲ್ಲ.

ಸೆರೆಗೆ ಹೋದವರು ಸಭೆಯ ಸದಸ್ಯರಾಗಿರಲಿ ಅಥವಾ ಇತರರೆ ಆಗಿರಲಿ ಅವರಿಗೆ ಮತ್ತೇನು ಹೆಚ್ಚಿನದನ್ನು ಮಾಡಬಹುದು?

**ಸೋಮವಾರ** **ಮಾರ್ಚ್ 21**

## ದ್ರವ್ಯಾಶೆ ಮತ್ತು ಲೈಂಗಿಕ ಅನೈತಿಕತೆ

ಇಬ್ರಿಯ 13:4,5, ಲೂಕ 16:10–18 ಮತ್ತು ಕೊರಿಂಥ 5:1, ಎಫೆಸ 5:3–5 ಮತ್ತು ಕೊಲಸ್ಸೆ 3:5 ಯಾವ ಎರಡು ಕೆಡಕುಗಳು ಈ ವಚನಗಳಲ್ಲಿ ಹೇಳಲ್ಪಟ್ಟಿವೆ?

ಲೈಂಗಿಕ ಅನೈತಿಕತೆ ಮತ್ತು ದ್ರವ್ಯಾಶೆಗಳು ಸಹೋದರ ಸ್ನೇಹಕ್ಕೆ ದೊಡ್ಡ ಬೆದರಿಕೆಯಾಗಿರುವುದರಿಂದ ಪೌಲನು ತನ್ನ ಓದುಗರಿಗೆ ಇವುಗಳ ಬಗ್ಗೆ ಎಚ್ಚರಿಕೆ ನೀಡುತ್ತಾನೆ. ಸತ್ಯಸಂಗತಿಯೇನೆಂದರೆ ಹೊಸ ಒಡಂಬಡಿಕೆಯ ಬರಹಗಾರರು ಮತ್ತು ಪೂರ್ವಕಾಲದ ನೀತಿಬೋಧಕರು ಇದೆರಡರ ನಡುವೆ ಇರುವ ಸಂಬಂಧವನ್ನು ಗಮನಿಸಿದ್ದಾರೆ.

ದಾಂಪತ್ಯ ಜೀವನವನ್ನು ಮಾನ್ಯವಾದದೆಂದು ಎಣಿಸಬೇಕು ಎಂಬುದು ಅದನ್ನು ನಿಕೃಷ್ಟವಾಗಿ ಮಾಡುವಂಥದ್ದನ್ನು ಎಂದಿಗೂ ತಪ್ಪಿಸಬೇಕೆಂದು ಸೂಚಿಸುತ್ತದೆ. ತಪ್ಪಿಸಬೇಕೆಂಬ ಪ್ರಕ್ರಿಯೆಯು ವಿವಾಹದ ಪ್ರತಿಜ್ಞೆಯನ್ನು ಮುರಿಯುವುದರಿಂದ ಮತ್ತು ವಿಚ್ಛೇದನೆಯನ್ನು ಪಡೆಯುವುದರಿಂದ ದೂರವಿರಬೇಕೆಂದು ತಿಳಿಸುತ್ತದೆ (ಮತ್ತಾಯ 19:9ನೇ ವಚನಕ್ಕೆ ಹೋಲಿಸಿರಿ). ಗಂಡಹೆಂಡಿರ ಸಂಬಂಧವು ನಿಷ್ಕಳಂಕವಾಗಿರಬೇಕು ಎಂಬ ಎಚ್ಚರಿಕೆಯು ವಿವಾಹ ಬಾಹಿರ ಸಂಬಂಧಗಳಿಂದ ಇದನ್ನು ಹೊಲೆ ಮಾಡಬಾರದು ಎಂಬುದನ್ನು ಸೂಚಿಸುತ್ತದೆ. ಜಾರತ್ವ ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಎಲ್ಲಾ ತರದ ಲೈಂಗಿಕ ಅನೈತಿಕತೆಗೆ ಸಂಬಂಧಪಡುತ್ತದೆ (1 ಕೊರಿಂಥ 5:9–11, 1 ಕೊರಿಂಥ 6:9,10, ಎಫೆಸ 5:5, 1 ತಿಮೊಥೆ 1:9,10 ಮತ್ತು ಪ್ರಕಟನೆ 21:8) ಮತ್ತು ಪ್ರಕಟನೆ 22:15. ಇದರ

ಜೊತೆಗೆ ಗ್ರೀಕ್ ರೋಮ್ ಸಮಾಜವು ಲೈಂಗಿಕ ನಡಾವಳಿಯ ಸಂಬಂಧದಲ್ಲಿ ಕಟ್ಟುನಿಟ್ಟನ್ನು ಪಾಲಿಸದೆ ಸಡಿಲಿಕೆಯನ್ನು ಹೊಂದಿತ್ತು. ಇದರಲ್ಲಿ ಇಬ್ಬಂದಿ ಮಾನದಂಡವು ಸಾಮಾನ್ಯವಾಗಿತ್ತು, ಇದು ಪುರುಷರಿಗೆ ಲೈಂಗಿಕ ಸಂಬಂಧದಲ್ಲಿ ಸ್ವೇಚ್ಛಾಪ್ರವೃತ್ತಿಯನ್ನು ವಿವೇಚನೆಯ ಪರಿಮಿತಿಯಲ್ಲಿ ಅನುವು ಮಾಡಿಕೊಟ್ಟಿತ್ತು. ದೇವರು ಜಾರರಿಗೂ ವ್ಯಭಿಚಾರಿಗಳಿಗೂ ನ್ಯಾಯತೀರಿಸುತ್ತಾನೆಂದು ಪೌಲನು ಎಚ್ಚರಿಕೆ ನೀಡುತ್ತಾನೆ. ಸಾಮಾಜಿಕ ಸೌಕರ್ಯಗಳು ವಿಶ್ವಾಸಿಗಳ ತಮ್ಮ ಸ್ವಂತ ನಡಾವಳಿಯ ಮಾನದಂಡವನ್ನು (ಅಳತೆಗೋಲನ್ನು) ತಾವೇ ನಿರ್ಧರಿಸುವುದಕ್ಕೆ ಅವಕಾಶ ಕೊಡಬಾರದು.

ಹಣದಾಶೆಯು ಗ್ರೀಕ್ ರೋಮನ್ ಸಮಾಜದಲ್ಲಿದ್ದ ದುರ್ಗುಣಗಳ ವರ್ಗದಲ್ಲಿ ಪ್ರಧಾನವಾದದ್ದಾಗಿತ್ತು. ಪೌಲನು ತಾನೇ ಬರೆದ ಮತ್ತೊಂದು ಪತ್ರಿಕೆಯಲ್ಲಿ ಹಣದಾಶೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆಯೆಂದು (1 ತಿಮೊಥೆ 6:10) ಸೂಚಿಸುತ್ತಾನೆ. ಈ ದುರ್ಗುಣಕ್ಕೆ ವಿರೋಧವಾಗಿ ನೀಡುವ ಮನೋಭಾವವನ್ನು ಹೊಂದಲು ತನ್ನ ಇತರೆ ಪತ್ರಿಕೆಗಳಲ್ಲಿ ಪ್ರೋತ್ಸಾಹ ನೀಡುತ್ತಾನೆ.

ಮೊದಲನೆಯದಾಗಿ ಅವರು ತಮಗಿದ್ದವುಗಳಲ್ಲಿ ತೃಪ್ತರಾಗಿರಬೇಕು (2 ಕೊರಿಂಥ 9:8 ಮತ್ತು ಫಿಲಿಪ್ಪಿ 4:11,12 ವಚನಗಳನ್ನು ಸಹಾ ನೋಡಿರಿ). ಇದಕ್ಕಿಂತಲೂ ಹೆಚ್ಚಿನದೇನೆಂದರೆ ದೇವರು ನಿಮ್ಮನ್ನು ಎಂದಿಗೂ ಕೈ ಬಿಡುವುದಿಲ್ಲವೆಂದು ತೊರೆಯುವುದಿಲ್ಲವೆಂದು ಮಾಡಿದ ವಾಗ್ದಾನಗಳನ್ನು ಕ್ರೈಸ್ತರು ಗಟ್ಟಿಯಾಗಿ ಅಪ್ಪಿಕೊಳ್ಳಬೇಕು (ಇಬ್ರಿಯ 13:5). ದೇವರು ತನ್ನ ಜನರಿಗೆ ಅನೇಕ ಸ್ಥಳಗಳಲ್ಲಿ, ಅನೇಕ ಸಂದರ್ಭಗಳಲ್ಲಿ ಈ ವಾಗ್ದಾನಗಳನ್ನು ಕೊಟ್ಟನು ಅವು ಇಂದಿಗೂ ಸಹಾ ನಮಗೆ ಲಭ್ಯವಾಗಿವೆ (ಆ.ಕಾಂಡ 28:15, ಧ.ಕಾಂಡ 31:6,8 ಯೆಹೋಶುವ 1:5 ಮತ್ತು 1 ಪೂ.ವೃ 28:20). ಕೀರ್ತನೆ 118:6ನೇ ವಚನದಲ್ಲಿರುವ ವಾಗ್ದಾನಗಳಿಗೆ ಪ್ರತಿಕ್ರಿಯಿಸುವಂತೆ ವಿಶ್ವಾಸಿಗಳಿಗೆ ಆಹ್ವಾನ ಕೊಡಲಾಗಿದೆ. "ಯಹೋವನು ನನಗಿದ್ದಾನೆ; ಭಯಪಡೆನು; ಮನುಷ್ಯನು ನನಗೆ ಏನು ಮಾಡಾನು? ಕೀರ್ತನೆ 118ನೆಯ ಉಲ್ಲೇಖವು ಸಮಂಜಸವಾಗಿದೆ. ಏಕೆಂದರೆ ಅವಿಶ್ವಾಸಿಗಳು ಆತನ ಮೇಲೆ ಎಷ್ಟೇ ಕಷ್ಟಕೋಟಲೆಗಳನ್ನು ತಂದರೂ ಕೀರ್ತನೆಗಾರನು ತನ್ನ ವಿಶ್ವಾಸವನ್ನು ದೇವರಲ್ಲಿ ವ್ಯಕ್ತಪಡಿಸುತ್ತಾನೆ.

ಸಮಕಾಲೀನ ಸಮಾಜವು ಯಾವ ರೀತಿಯಲ್ಲಿ ಲೈಂಗಿಕ ಪರಿಶುದ್ಧತೆಯನ್ನು ಅಲ್ಲಗಳೆಯುತ್ತದೆ. ಅದೇ ಸಂದರ್ಭದಲ್ಲಿ ಮನುಷ್ಯ ದ್ರವ್ಯಾಶೆಯನ್ನು ಹೇಗೆ ಪೋಷಿಸುತ್ತದೆ? ನಮ್ಮ ಜೀವನದಲ್ಲಿ ಈ ಎರಡು ಅಪಾಯಕರ ದುರ್ಗುಣಗಳಿಗೆ ವಿರೋಧವಾಗಿ ಕಾರ್ಯರೂಪದಲ್ಲಿ ಯಾವ ರೀತಿಯಲ್ಲಿ ಬಲವನ್ನು ಹೊಂದಿಕೊಳ್ಳಬಹುದು?

**ಮಂಗಳವಾರ** **ಮಾರ್ಚ್ 22**

## ನಿಮ್ಮ ಸಭಾನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ

ಇಬ್ರಿಯ 13:7–17 ವಚನಗಳನ್ನು ಓದಿರಿ. ನಮ್ಮ ಸಭಾನಾಯಕರ ಜೊತೆ ನಮ್ಮ ಸಂಬಂಧವು ಹೇಗಿರಬೇಕು?

ಸಭೆಯು ನಾಯಕರಿಗೆ ಗೌರವವನ್ನು ಕೊಡಬೇಕು. ಅವರಿಗೆ ಅಧೀನರಾಗಿರಬೇಕೆಂದು ಇಬ್ರಿಯ 13:7–17 ವಚನಗಳು ಎಚ್ಚರಿಕೆಯನ್ನು ಕೊಡುತ್ತವೆ. ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು 'ಜ್ಞಾಪಕ ಮಾಡಿಕೊಳ್ಳಿರಿ' ಎಂಬುದಾಗಿ ಆರಂಭಿಸಿ ಅವರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ ಎಂಬುದಾಗಿ ಮುಕ್ತಾಯವಾಗುತ್ತದೆ' (ಇಬ್ರಿಯ 13:17).

ನಿಮಗೆ ವಾಕ್ಯವನ್ನು ತಿಳಿಸಿದ ಸಭಾನಾಯಕರು ಎಂದರೆ ಆರಂಭದಲ್ಲಿ ವಾಕ್ಯವನ್ನು ಹೇಳಿ ಸಭೆಗೆ ಸೇರಿಸಿಕೊಂಡು ಅದನ್ನು ಬೆಳೆಸಿದವರೆಂದು ಅರ್ಥ ಮಾಡಿಕೊಳ್ಳಬಹುದು. ಅವರನ್ನು ಜ್ಞಾಪಕ ಮಾಡಿಕೊಳ್ಳಿರಿ ಎಂದರೆ ಅದನ್ನು ಕೇವಲ ಮಾನಸಿಕವಾಗಿ ನೆನಪಿಗೆ ತಂದುಕೊಂಡು ಬಾಹ್ಯವಾಗಿ ಗೌರವಿಸುವುದಲ್ಲ. ಅವರು ಯಾವ ರೀತಿ ನಡಕೊಂಡರೋ ಹಾಗೆ ವಿಶ್ವಾಸಿಗಳೂ ನಡೆದುಕೊಳ್ಳಬೇಕು. ಅವರಿಗೆ ಅಧೀನರಾಗಿರಬೇಕು. ಹೀಗೆ ಅವರನ್ನು ಜ್ಞಾಪಕ ಮಾಡಿಕೊಳ್ಳುವುದು ಎಂದರೆ ಅವರ ನಂಬಿಕೆಯನ್ನು ಅನುಸರಿಸುವುದೆಂದು ಪೌಲನು ವಿವರಿಸುತ್ತಾನೆ.

ಒಬ್ಬರನ್ನು ಜ್ಞಾಪಕ ಮಾಡಿಕೊಳ್ಳುವ ಮತ್ತು ಮೆಚ್ಚುವ ಮಹಾಕೆಲಸವನ್ನು ಅವರನ್ನು ಅನುಸರಿಸುವುದರ ಮುಖಾಂತರ ತೋರಿಸಬಹುದು. ಈ ರೀತಿಯಾಗಿ ಸಭೆಯನ್ನು ಕಟ್ಟಿದ ನಾಯಕರನ್ನು ಪೌಲನು ನಂಬಿಗಸ್ತ ನಾಯಕರ ಪಟ್ಟಿಗೆ ಸೇರಿಸುತ್ತಾನೆ. ಅವರನ್ನು ವಿಶ್ವಾಸಿಗಳು ಎಚ್ಚರಿಕೆಯಿಂದ ಪರಿಗಣಿಸಬೇಕೆಂದು ಬುದ್ಧಿ ಹೇಳುತ್ತಾನೆ. ಈ ಪಟ್ಟಿಯು ಇಬ್ರಿಯ 11ನೇ ಅಧ್ಯಾಯ 12ನೇ ಅಧ್ಯಾಯದಲ್ಲಿ

ಬರುವ ನಂಬಿಗಸ್ತರ ಪಟ್ಟಿಯನ್ನು ಒಳಗೊಂಡಿದೆ. ಯೇಸುವು ನಂಬಿಕೆಗೆ ಶಿಖರಪ್ರಾಯದ ಮಾದರಿಯಾಗಿದ್ದಾನೆ. ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ; ನಿರಂತರವೂ ಹಾಗೆಯೇ ಇರುವನು ಎಂದು ಪತ್ರಿಕೆಯ ಕೃತಿಕಾರನು ಉಲ್ಲೇಖಿಸುತ್ತಾನೆ (ಇಬ್ರಿಯ 13:8). ಕಾಲಕ್ಕೆ ತಕ್ಕಂತೆ ತಮ್ಮ ಉಪದೇಶವನ್ನು ಬದಲಾಯಿಸುವ ನಾನಾ ವಿಧವಾದ ಅನ್ಯೋಪದೇಶಗಳನ್ನು ಮಾಡುವವರಿಗೆ ಯೇಸುವು ವ್ಯತಿರಿಕ್ತವಾಗಿ ನಿಲ್ಲುವವನಾಗಿದ್ದಾನೆ (ಇಬ್ರಿಯ 13:9).

ಸಭಾನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ ಎಂಬ ಕರೆಯು ಈ ಅಧ್ಯಾಯದ ಅಂತ್ಯದಲ್ಲಿ ಇನ್ನೂ ಬಲಯುತವಾದ ಮಾತುಗಳಿಂದ ಪುನರಾವರ್ತನೆಯಾಗಿದೆ. ಸಭಾನಾಯಕರನ್ನು ವಿಶ್ವಾಸಿಗಳು ಅನುಸರಿಸಬೇಕೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಯಾಕೆಂದರೆ ನಾಯಕರು ವಿಶ್ವಾಸಿಗಳ ಆತ್ಮವನ್ನು ಕಾಯುವವರಾಗಿರುತ್ತಾರೆ. ಸಭಾನಾಯಕರನ್ನು ಸಭಾಪಾಲಕರೆಂದು ಬಣ್ಣಿಸಲಾಗಿದೆ. ಯಾಕೆಂದರೆ ಅವರು ಸಭೆಯ ಆತ್ಮೀಕ ಬೆಳವಣಿಗೆಯ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅವರು ವಿಶ್ವಾಸಿಗಳ ಆತ್ಮೀಕ ಸ್ಥಿತಿಗತಿಗಳ ಬಗ್ಗೆ ಲೆಕ್ಕ ಒಪ್ಪಿಸುವವರಾಗಿರುತ್ತಾರೆ (1 ಪೇತ್ರ 5:1–4; 1 ಕೊರಿಂಥ 3:10–15ನ್ನು ನೋಡಿರಿ). ಖಂಡಿತವಾಗಿ ಇದೇ ಆಲೋಚನೆಯು ನಮ್ಮ ಸಭೆಯ ನಾಯಕರುಗಳಿಗೂ ಅನ್ವಯವಾಗುತ್ತದೆ. ಪ್ರತಿಸಭೆಯ ಪ್ರತಿಹಂತದಲ್ಲೂ ಅನ್ವಯವಾಗುತ್ತದೆ.

ಈ ನಾಯಕರು ಯೇಸುವೆಂಬ ಮಹಾಪಾಲಕನ ಅಡಿಯಲ್ಲಿ ಬರುವ ಕುರುಬರಂತಿದ್ದಾರೆ ಎಂಬ ಅಭಿಪ್ರಾಯ ನೀಡುತ್ತದೆ (ಇಬ್ರಿಯ 13:20). ಸಭಾನಾಯಕರ ಕಾಳಜಿ ಮತ್ತು ನಂಬಿಗಸ್ತಿಕೆಯು ವಿಶ್ವಾಸಿಗಳ ನಂಬಿಕೆ ಮತ್ತು ವಿಧೇಯತೆಯು ಜೊತೆ ಸೇರಿದಾಗ ಫಲಿತಾಂಶವು ಆನಂದಮಯವಾಗಿರುತ್ತದೆ. ಸಭಾನಾಯಕರು ಸಂತೋಷದಿಂದ ಸಭೆಯನ್ನು ನಡೆಸಿಕೊಂಡು ಹೋಗುತ್ತಾರೆಂಬುದು ಇದರ ಆತ್ಮಗಳನ್ನು ಕಾಯುವವರಾಗಿ ಅವುಗಳ ಲೆಕ್ಕವನ್ನು ಸಂತೋಷದಿಂದ ಕೊಡುತ್ತಾರೆ. ಆವಾಗ ಅವರಿಗೆ ಆತ್ಮಗಳ ವಿಷಯದಲ್ಲಿ ಯಾವುದೇ ದುಃಖವಿರುವುದಿಲ್ಲ.

ಸಭೆಯಲ್ಲಿ ಮತ್ತು ನಮ್ಮ ಸುತ್ತಲಿನ ಪ್ರಪಂಚದಲ್ಲಿ ಸಭಾಪಾಲಕರ ಮತ್ತು ಸಭಿಕರ ಮಧ್ಯೆ ಇರುವ ಸಂಬಂಧವನ್ನು ಹೇಗೆ ಬಲಪಡಿಸಬಹುದು ಇಲ್ಲವೆ ಸುಧಾರಿಸಬಹುದು?

ಬುಧವಾರ ಮಾರ್ಚ್ 23

## ನಾನಾ ವಿಧವಾದ ಅನ್ಯೋಪದೇಶಗಳ ಬಗ್ಗೆ ಎಚ್ಚರ ವಹಿಸಿರಿ

ಇಬ್ರಿಯ 13:9, ಇಬ್ರಿಯ 2:9, ಇಬ್ರಿಯ 4:16 ಮತ್ತು ಇಬ್ರಿಯ 6:19,20 ವಚನಗಳನ್ನು ಹೋಲಿಸಿರಿ. ನಾವು ಕೃಪೆಯನ್ನು ಹೇಗೆ ಹೊಂದಬಹುದು ಮತ್ತು ನಮ್ಮ ಹೃದಯಗಳನ್ನು ಹೇಗೆ ಬಲಪಡಿಸಿಕೊಳ್ಳಬಹುದು?

ಇಬ್ರಿಯ 13:9ನೇ ವಚನವು ಅನ್ಯ ಉಪದೇಶಗಳಿಗೂ ಭೋಜನ ಪದಾರ್ಥಗಳಿಗೂ ಇರುವ ಸಂಬಂಧವನ್ನು ಸ್ಪರ್ಶಿಸುತ್ತದೆ, ಇದು ಶುದ್ಧ ಮತ್ತು ಅಶುದ್ಧ ಭೋಜನ ಪದಾರ್ಥಗಳನ್ನು ಕುರಿತು ಹೇಳುತ್ತಿಲ್ಲವೆಂದು ತಿಳಿಯುತ್ತದೆ. ಯಾಕೆ?

ಮೊದಲನೆಯದಾಗಿ, ಪೌಲನು ತನ್ನ ಪತ್ರಿಕೆಯಲ್ಲಿ ಶುದ್ಧ ಮತ್ತು ಅಶುದ್ಧ ಭೋಜನ ಪದಾರ್ಥಗಳ ನಡುವಿನ ವ್ಯತ್ಯಾಸದ ಬಗ್ಗೆ ಆತನು ಕಾಳಜಿ ವಹಿಸಿದಂತೆ ಕಾಣುವುದಿಲ್ಲ. ಅ.ಕೃ.15ನೇ ಅಧ್ಯಾಯದಲ್ಲಿ ಸುನ್ನತಿ ಹೊಂದಿದವರ ಮತ್ತು ಸುನ್ನತಿ ಹೊಂದದಿರುವರ ಮಧ್ಯೆ ಭಿನ್ನಭಿಪ್ರಾಯ ಉಂಟಾದಾಗ ಎರಡೂ ವರ್ಗದ ವಿಶ್ವಾಸಿಗಳು ಕೃಪೆಯಿಂದಲೆ ರಕ್ಷಣೆ ಹೊಂದುತ್ತಾರೆಂದು ನಮಗೆ ತಿಳಿದು ಬರುತ್ತದೆ (ಅ.ಕೃ. 15:7–11) ಮತ್ತು ಅವರು ಆಹಾರದ ವಿಷಯದಲ್ಲಿ ಕೆಲವು ಕಟ್ಟುಪಾಡುಗಳನ್ನು ಮುಂದುವರೆಸಿಕೊಂಡ ಹೋಗಬೇಕಾಗಿತ್ತು (ಅ.ಕೃಉ. 15:19,20). ಆಹಾರದಲ್ಲಿ ಶುದ್ಧಮತ್ತು ಅಶುದ್ಧ ಎಂಬ ಭಿನ್ನತೆ ಹಾಗೂ ಧಾರ್ಮಿಕ ಕಟ್ಟುಪಾಡುಗಳು ಕೃಪೆಗೆ ವಿರೋಧಿಯಾಗಿರಲಿಲ್ಲ. ಹೇಳಬೇಕೆಂದರೆ ಹೊಸ ಒಡಂಬಡಿಕೆಯು ನ್ಯಾಯ ಪ್ರಮಾಣವನ್ನು ಹೃದಯದಲ್ಲಿ ಇಡುತ್ತದೆ (ಇಬ್ರಿ 8:10–12). ಪೌಲನು ಇಲ್ಲಿ ಸ್ಪಷ್ಟಪಡಿಸುವುದೇನೆಂದರೆ ಪ್ರಾಣಿಗಳ ಬಲಿ ಮತ್ತು ದೇವದರ್ಶನ ಗುಡಾರದಲ್ಲಿನ ಲೇವಿಕ ಯಾಜಕರ ಮಧ್ಯಸ್ತಿಕೆಯು ಉತ್ತಮೋತ್ತಮವಾದ ಯೇಸುವಿನ ಯಜ್ಞದಿಂದಲೂ ಆತನ ಯಾಜಕತನದ ಮಧ್ಯಸ್ತಿಕೆಯಿಂದಲೂ ತೆಗೆದುಹಾಕಲ್ಪಟ್ಟಿವೆ (ಇಬ್ರಿಯ 8:4,5, ಇಬ್ರಿಯ 10:1–18).

ಎರಡನೆಯದಾಗಿ, ವಿಶ್ವಾಸಿಗಳು ಕೆಲವು ಭೋಜನ ಪದಾರ್ಥಗಳನ್ನು ಬಿಟ್ಟಿಲ್ಲವೆಂಬ ಕಾರಣದಿಂದ ಪೌಲನು ಟೀಕಿಸುತ್ತಿದ್ದಾನೆಂದು ಈ ಸಂದರ್ಭವು ಸೂಚಿಸುವುದಿಲ್ಲ. ಆದರೆ ಹೇಗಾದರೂ ಭೋಜನ ಪದಾರ್ಥಗಳನ್ನು ವಿಶೇಷಿಸುವುದರಿಂದ ತಾವು ಕೃಪೆಯ ಪಾಲುಗಾರರಾಗಬೇಕೆಂಬ ಅವರ ಬಯಕೆಯನ್ನು ಟೀಕಿಸುತ್ತಾನೆ (ಇಬ್ರಿಯ

13:9). ಬಹುಶಃ ಪೌಲನು ಅವರನ್ನು ಯಹೂದ್ಯರ ಸಂಸ್ಕಾರಗಳಿಗೆ ಅಥವಾ ಯಜ್ಞಗಳನ್ನು ಸಮರ್ಪಿಸಿದ ಮೇಲೆ ಅವುಗಳನ್ನು ಬೇಯಿಸಿ ತಿನ್ನುವ ಧಾರ್ಮಿಕ ಭೋಜನವನ್ನು ಸೇವಿಸುವುದರಿಂದ ದೇವರ ಕೃಪೆಗೆ ಪಾತ್ರರಾಗುತ್ತೇವೆ ಎಂದು ಕೊಂಡದ್ದಕ್ಕೆ ಟೀಕಿಸುತ್ತಿರಬಹುದು. ಆದರೆ ಭೋಜನ ಪದಾರ್ಥವು ಕೃಪೆಯನ್ನು ದೊರಕಿಸಿಕೊಡುವಲ್ಲಿ ಮಧ್ಯಸ್ತಿಕೆ ವಹಿಸಲಾರದು ಕೃಪೆಯು ಯೇಸುಕ್ರಿಸ್ತನ ಬಲಿಯಿಂದ ಮತ್ತು ಆತನ ಯಾಜಕತ್ವದ ಮಧ್ಯಸ್ತಿಕೆಯಿಂದ ಮಾತ್ರ ದೊರಕುತ್ತದೆ. ವಿಶ್ವಾಸಿಗಳಿಗೆ ಕ್ರಿಸ್ತನ ಶಿಲುಬೆಯೇ ಯಜ್ಞವೇದಿಕೆಯಾಗಿದೆ ಅವರು ಯೇಸುವೆಂಬ ನಿಜವಾದ ರೊಟ್ಟಿಯನ್ನು ಸೇವಿಸಬಹುದು (ಯೋಹಾನ 6:47–58).

ಕೃಪೆಯು ದೇವರ ಸಿಂಹಾಸನದಿಂದ ಒದಗುತ್ತದೆ ಎಂದು ಇಬ್ರಿಯ ಪತ್ರಿಕೆಯು ತಿಳಿಸುತ್ತದೆ (ಇಬ್ರಿಯ 4:16). ಈ ಕೃಪೆಯು ಯೇಸುಕ್ರಿಸ್ತನ ಮಧ್ಯಸ್ತಿಕೆಯು ಲಂಗರಿನಂತೆ, ನಿಶ್ಚಯವಾದದ್ದು, ದೃಢವಾಗಿರುವಂಥದ್ದು ಆಗಿದ್ದು ದೇವರ ಸಿಂಹಾಸನಕ್ಕೆ ಬಿಗಿಯಲ್ಪಟ್ಟಿದೆ (ಇಬ್ರಿಯ 6:19,20ನ್ನು ಇಬ್ರಿಯ 4:16 ವಚನಕ್ಕೆ ಹೋಲಿಸಿರಿ).

ನಾವು ಹೊಂದಿಕೊಳ್ಳುತ್ತಿರುವುದು ಈ ಕೃಪೆಯನ್ನು ಇದನ್ನು ನಾವು ಯೇಸುಕ್ರಿಸ್ತನ ಬಲದಿಂದ ಪಡೆದುಕೊಳ್ಳುತ್ತೇವೆ ಮತ್ತು ನಮ್ಮ ಹೃದಯಗಳಿಗೆ ಸ್ಥಿರತೆಯನ್ನೂ ಭರವಸೆಯನ್ನೂ ಇದು ಒದಗಿಸುತ್ತದೆ. ಹೃದಯವು ಈ ರೀತಿಯಾಗಿ ಸಂಸ್ಥಾಪನೆಗೊಂಡಿದ್ದರೆ ಆವಾಗ ಅದು ಅನ್ಯೋಪದೇಶಗಳ ಸೆಳವಿಗೆ ಸಿಕ್ಕಿ ಕೊಚ್ಚಿ ಹೋಗುವುದಿಲ್ಲ (ಇಬ್ರಿಯ 13:9), ದೇವರಿಂದ ದೂರಕ್ಕೆ ಸರಿದು ಹೋಗುವುದಿಲ್ಲ (ಇಬ್ರಿ 2:1).

ಯೇಸುವಿನ ಪರಿಪೂರ್ಣವಾದ ಯಜ್ಞದ ಮೇಲೆ ನಿಮ್ಮ ಮನಸ್ಸನ್ನು ನೆಲೆಗೊಳಿಸಿರಿ. ಈ ಯಜ್ಞದ ಜೊತೆಗೆ ಮತ್ತೆ ಏನನ್ನಾದರೂ ಸೇರಿಸಬೇಕೆಂಬ ನಮ್ಮ ಯಾವುದೇ ಆಲೋಚನೆಯು ಸುವಾರ್ತೆಗೂ ಯೇಸುವಿನಲ್ಲಿ ಸಿಕ್ಕಿರುವ ಕೃಪೆಗೂ ವಿರೋಧವಾಗಿರುತ್ತದೆ ಯಾಕೆ?

**ಗುರುವಾರ** **ಮಾರ್ಚ್ 25**

## ಪಾಳೆಯದ ಹೊರಗಿರುವ ಯೇಸುವಿನ ಹತ್ತಿರ ಹೋಗಿರಿ

ಇಬ್ರಿಯ 13:10–14, ಮಾರ್ಕ 8:34, ಮತ್ತಾಯ 10:38, ಲೂಕ 14:27 ಮತ್ತು ಗಲಾತ್ಯ 2:20 ವಚನಗಳನ್ನು ಹೋಲಿಸಿರಿ. ಪಾಳಯದ ಹೊರಗಿರುವ

ಯೇಸುವಿನ ಬಳಿಗೆ ಹೋಗಿರಿ ಎಂಬುದರ ಅರ್ಥವೇನು?

ಇಡೀ ಪಾಳಯದಲ್ಲಿ ಅದರ ಹೊರಗಿನ ಸ್ಥಳವು ಬಹಳ ಅಶುದ್ಧವಾಗಿರುತ್ತಿತ್ತು ಯಜ್ಞಪಶುಗಳ ದೇಹಗಳನ್ನು ಅಲ್ಲಿ ಸುಡುತ್ತಿದ್ದರು (ಯಾಜಕಕಾಂಡಾ 4:12). ಕುಷ್ಠ ಹತ್ತಿದವರನ್ನೂ ಸಹಾ ಪಾಳೆಯದ ಹೊರಕ್ಕೆ ಹಾಕುತ್ತಿದ್ದರು (ಯಾ.ಕಾಂಡ 13:46). ದೇವದೂಷಕರು ಮತ್ತು ಇತರೆ ಅಪರಾಧಿಗಳು ಅಲ್ಲಿ ಶಿಕ್ಷೆಗೆ ಒಳಪಡುತ್ತಿದ್ದರು (ಯಾ.ಕಾಂಡ 24:10–16, 23 ಮತ್ತು 1 ಅರಸು 21:13, ಅ.ಕೃ 7:58).

ದೇವರ ಪ್ರಸನ್ನತೆಯು ಪಾಳೆಯದಲ್ಲಿ ನೆಲೆಯಾಗಿರುತ್ತದೆ ಎಂಬ ಪೂರ್ವಭಾವವನ್ನು ಈ ಕಟ್ಟುಪಾಡುಗಳು ಸಮರ್ಥಿಸುತ್ತವೆ. ಕೊಳಕಾದದು, ಹೊಲೆಯಾದುದು ಯಾವುದೇ ಅಶುದ್ಧವೆನಿಸಿಕೊಳ್ಳುವಂಥದ್ದು ಪಾಳೆಯದ ಹೊರಕ್ಕೆ ಬೀಸಾಡಲ್ಪಡುತ್ತಿತ್ತು ಯಾಕಂದರೆ ಇವುಗಳು ಪಾಳಯದೊಳಗೆ ಇರುವುದನ್ನು ದೇವರು ಸಹಿಸುತ್ತಿರಲಿಲ್ಲ (ಅರಣ್ಯಕಾಂಡಾ 5:3, ಧ.ಕಾಂಡ 23:14).

ಯೆರೂಸಲೇಮಿನ ಹೊರಗೆ ಯೇಸುವು ಶಿಲುಬೆಯ ಮರಣದ ಶಿಕ್ಷೆಯನ್ನು ಅನುಭವಿಸಿದನು (ಯೋಹಾನ 19:17–20). ಆತನ ಮೇಲೆ ಹಾಕಿದ ಅವಮಾನವನ್ನು ಇದು ಎತ್ತಿ ಹಿಡಿಯುತ್ತದೆ (ಇಬ್ರಿ 12:2). ಆತನ ಮೇಲೆ ದೇವದೂಷಕನೆಂಬ ಆಪಾದನೆಯನ್ನು ಅಧಿಕೃತವಾಗಿ ಹೊರಿಸಿ, ಆತನನ್ನು ನಿರಾಕರಿಸಿ, ಪಾಳೆಯದ ಹೊರಗೆ ಹಾಕಿ ಮರಣದಂಡನೆಯನ್ನು ವಿಧಿಸಿದರು ಮಾರ್ಕ 14:63,64 ಹಾಗೂ ಯಾ.ಕಾಂಡ 24:11,16ನ್ನು ನೋಡಿರಿ). ಯೇಸುವು ಒಂದು ಅವಮಾನಕರವಾದ ಹೊಲೆಯಾದ, ಅಸಹ್ಯವಾದ ವಸ್ತುವಿನಂತೆ ಪಾಳೆಯದ ಹೊರಕ್ಕೆ ಹಾಕಲ್ಪಟ್ಟನು. ಆತನು ವಿಶ್ವಾಸಿಗಳಾದ ನಾವು ಸಹಾ ಯೇಸುವಿನಂತೆ ನಿಂದೆ ಅಪಮಾನಗಳನ್ನು ಸಹಿಸಿಕೊಂಡು ಊರಿನ ಹೊರಗೆ ಯೇಸುವನ್ನು ಹಿಂಬಾಲಿಸಿಬೇಕೆಂಬುದಾಗಿ ಪೌಲನು ಎಚ್ಚರಿಸುತ್ತಾನೆ (ಇಬ್ರಿಯ 12:2, ಇಬ್ರಿಯ 13:13). ಮೋಶೆಯು ಸಹಾ ಇದೇ ಮಾರ್ಗವನ್ನು ಅನುಸರಿಸಿದನು ಆತನು ಐಗುಪ್ತದೇಶದ ಸರ್ವೈಶ್ವರಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಠ ಭಾಗ್ಯವೆಂದೆಣಿಸಿಕೊಂಡನು (ಇಬ್ರಿ 11:26).

ಆದರೆ ಈವಾಗ ದೇವರು ಪಾಳೆಯದ ಹೊರಗಿದ್ದಾನೆಂದು ಇಬ್ರಿಯ ಪತ್ರಿಕೆಯು ವಿರೋಧಭಾಸವುಳ್ಳ ಮಾತನ್ನು ಹೇಳುತ್ತಿದೆ. ಯೇಸುವನ್ನು ಊರಿನ ಹೊರಗೆ

ಅನುಸರಿಸಿ ನಡೆಯುವ ಕಾರ್ಯವು ಕೇವಲ ನಿಂದೆ ಅಪವಾನಗಳನ್ನು ಸಹಿಸಿಕೊಳ್ಳುವುದು ಮಾತ್ರವಲ್ಲ. ಆದರೆ ಆತನ ಹತ್ತಿರಕ್ಕೆ ಹೋಗುವುದೂ ಆಗಿದೆ (ಇಬ್ರಿಯ 13:13). ಯಾವ ರೀತಿಯಲ್ಲಿ ಅರಣ್ಯದಲ್ಲಿ ಚಿನ್ನದ ಬಸವನ ವಿವಾದ ಉಂಟಾದಾಗ ಮೋಶೆಯು ದೇವದರ್ಶನ ಗುಡಾರವನ್ನು ತೆಗೆದುಬಿಟ್ಟಾಗ ಇಸ್ರಾಯೇಲ್ಯರು ದೇವರನ್ನು ಕಾಣುವುದಕ್ಕೆ ಪಾಳೆಯದ ಹೊರಗೆ ನಡೆದರೋ ಹಾಗೆ ನಾವು ಕೂಡ ನಡೆಯಬೇಕು (ವಿ.ಕಾಂಡ 33:7). ಈ ನಿದರ್ಶನವು ನಮಗೆ ಇಸ್ರಾಯೇಲ್ಯರು ಚಿನ್ನದ ಬಸವನನ್ನು ಮಾಡಿಕೊಂಡು ದೇವರನ್ನು ತಿರಸ್ಕರಿಸಿದಂತೆ ಅವಿಶ್ವಾಸಿಗಳು ಯೇಸುವನ್ನು ತಿರಸ್ಕರಿಸಿದರು ಎಂಬುದನ್ನು ತಿಳಿದುಕೊಳ್ಳುವಂತೆ ಸೂಚಿಸುತ್ತದೆ (ವಿ.ಕಾಂಡ 32, ವಿ.ಕಾಂಡ 33). ಹಾಗಾಗಿ, ನಿಂದೆ ಅವಮಾನ ಕಷ್ಟಗಳ ಮಾರ್ಗವು ದೇವರೆಡೆಗೆ ನಡೆಸುವ ಮಾರ್ಗವೂ ಆಗಿದೆ.

ಯೇಸುವ ನಮ್ಮ ನಂಬಿಕೆಯನ್ನು ಹುಟ್ಟಿಸುವವನೂ ಅದನ್ನು ಪೂರೈಸುವವನೂ ಆಗಿರುವುದರಿಂದ ಆತನನ್ನು ಹಿಂಬಾಲಿಸಬೇಕೆಂದು ಪೌಲನು ಓದುಗರನ್ನು ಆಹ್ವಾನಿಸುತ್ತಾನೆ. ಇಂದು ನಾವು ಅನುಭವಿಸುವ ಕಷ್ಟಗಳು ನಮ್ಮನ್ನು ಶಿಸ್ತಿಗೆ ಒಳಪಡಿಸಿ ಶಾಂತತೆ ಎಂಬ ನೀತಿಯ ಫಲವನ್ನು ಕೊಡುತ್ತವೆ ಎಂದು ಪರಿಗಣಿಸುವುದಕ್ಕೂ ಸಹಾ ಪೌಲನು ನಮ್ಮನ್ನು ಆಹ್ವಾನಿಸುತ್ತಾನೆ (ಇಬ್ರಿ 12:11). ಅವರು ಇಹದಲ್ಲಿ ಕೆಟ್ಟುಹೋದ ಪಾಳೆಯವನ್ನು ಅಥವಾ ಪಟ್ಟಣವನ್ನು ಬಿಟ್ಟು ದೇವರ ಕೈಗಳಿಂದ ಕಟ್ಟಲ್ಪಟ್ಟಿರುವ ಮುಂದಿನ ಕಾಲದ ಪಟ್ಟಣವನ್ನು ಹಾರೈಸುವವರಾಗಿದ್ದರು (ಇಬ್ರಿ 13:14, ಇಬ್ರಿಯ 11:10,16).

ಪಾಳೆಯದ ಆಚೆಯಿರುವ ಯೇಸುವನ್ನು ಅನುಸರಿಸುವುದು ಎಂದರೆ ಏನು ಅರ್ಥ? ಯೇಸುವಿನಲ್ಲಿ ನಂಬಿಕೆಯಿಟ್ಟು ನಡೆಸುವ ಜೀವನದ ಯಾವ ಅಂಶಗಳು ನಿಮ್ಮ ಸುತ್ತ ಇರುವ ಜನರಿಂದ ನಿಂದೆ ಅವಮಾನಗಳನ್ನು ತರುತ್ತವೆ?

**ಶುಕ್ರವಾರ** **ಮಾರ್ಚ್ 25**

**ಹೆಚ್ಚಿನ ಚಿಂತನೆ :** ಪರಿಶುದ್ಧಾತ್ಮನು ವಿಶ್ವಾಸಿಗಳ ಮೇಲೆ ಅಭಿಷೇಕ ಮಾಡಿದಾಗ ಎಲ್ಲರೂ ದೇವಜನರ ಮಧುರ ಬಾಂಧವ್ಯದಲ್ಲಿ ಉಲ್ಲಾಸಗೊಂಡರು. ಅವರೆಲ್ಲರೂ ಮೃದು ಸ್ವಭಾವಿಗಳೂ, ಚಿಂತನಾಶೀಲರೂ, ಸ್ವನಿರಾಕರಣೆಯುಳ್ಳವರೂ ಸತ್ಯದ

ಸಲುವಾಗಿ ಯಾವುದೇ ತ್ಯಾಗವನ್ನು ಮಾಡುವುದಕ್ಕೆ ಸಿದ್ಧರಾದವರೂ ಆಗಿದ್ದರು. ತಮ್ಮ ದೈನಂದಿನ ಸಹಬಾಳ್ವೆಯಲ್ಲಿ ಒಬ್ಬರಿಗೊಬ್ಬರು ಕ್ರಿಸ್ತನು ತೋರಿಸಿದ ಪ್ರೀತಿಯನ್ನು ವ್ಯಕ್ತಪಡಿಸಿದರು. ನಿಸ್ವಾರ್ಥ ತುಂಬಿದ ಕೆಲಸಗಳಿಂದಲೂ ಮಾತುಗಳಿಂದಲೂ ಇತರರ ಹೃದಯಗಲಲ್ಲಿ ಈ ಪ್ರೀತಿಯನ್ನು ಹೊತ್ತಿಸಲು ಪ್ರಯತ್ನಪಟ್ಟರು....

"ಆದರೆ ಕ್ರಮೇಣವಾಗಿ ಒಂದು ಬದಲಾವಣೆ ಬಂತು. ವಿಶ್ವಾಸಿಗಳಾದ ಮತ್ತೊಬ್ಬರ ದೋಷಗಳನ್ನು ನೋಡುವುದಕ್ಕೆ ಆರಂಭಿಸಿದರು. ಮತ್ತೊಬ್ಬರ ತಪ್ಪುಗಳನ್ನೇ ಧ್ಯಾನ ಮಾಡುತ್ತಾ ನಿಷ್ಠುರವಾದ ನಿಂದನೆಯಲ್ಲಿ ತೊಡಗಿಕೊಂಡರು. ಕಡೆಗೆ ರಕ್ಷಕನ ಮೇಲಿನ ದೃಷ್ಟಿಯನ್ನು ಆತನ ಪ್ರೀತಿಯನ್ನು ಕಳೆದುಕೊಂಡರು. ಬಹಿರಂಗ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತೊಡಗಿದರು. ನಂಬಿಕೆಯ ಜೀವಿತವನ್ನು ಅಭ್ಯಾಸ ಮಾಡದೆ ಕೆಲವು ಸಿದ್ಧಾಂತಗಳನ್ನು ಹಿಡಿದುಕೊಂಡರು. ಇತರರನ್ನು ಖಂಡಿಸುವ ಭರದಲ್ಲಿ ತಮ್ಮ ತಪ್ಪುದೋಷಗಳನ್ನು ಅಲಕ್ಷ್ಯ ಮಾಡಿದರು. ಅವರ ಮಧ್ಯದಲ್ಲಿ ಕ್ರಿಸ್ತನು ನಿರ್ದೇಶಿಸಿದ ಸಹೋದರ ಸ್ನೇಹವನ್ನು ಕಳೆದುಕೊಂಡರು. ಎಲ್ಲದಕ್ಕಿಂತಲೂ ಹೆಚ್ಚಿನ ದುಃಖಕರ ವಿಷಯವೇನೆಂದರೆ ತಮಗಾದ ನಷ್ಟದ ಬಗ್ಗೆ ಅವರಿಗೆ ಅರಿವೇ ಇರಲಿಲ್ಲ. ಪ್ರೀತಿ ಸಂತೋಷಗಳು ಅವರ ಬದುಕಿನಿಂದ ಕಳೆದುಹೋದದು ಅವರ ಅರಿವಿಗೆ ಬರಲೇ ಇಲ್ಲ, ದೇವರ ಪ್ರೀತಿಗೆ ತಮ್ಮ ಹೃದಯದ ಬಾಗಿಲುಗಳನ್ನು ಮುಚ್ಚಿಕೊಂಡದ್ದರಿಂದ ಬಹಳ ಬೇಗ ಕತ್ತಲೆಯಲ್ಲಿ ನಡೆಯ ತೊಡಗಿದರು.

"ಸಭೆಯಲ್ಲಿ ಸಹೋದರ ಸ್ನೇಹವು ಕ್ಷೀಣಿಸುತ್ತಾ ಬರುತ್ತಿರುವುದು ಯೋಹಾನನ ಗಮನಕ್ಕೆ ಬರಲಾಗಿ ವಿಶ್ವಾಸಿಗಳಿಗೆ ಅದರ ನಿರಂತರವಾದ ಅಗತ್ಯತೆಯನ್ನು ಕಡ್ಡಾಯ ಪಡಿಸಿದನು. ಸಭೆಗೆ ಅವನು ಬರೆದ ಪತ್ರಿಕೆಯ ತುಂಬ ಈ ಚಿಂತನೆಯನ್ನೇ ಮಾಡಿದ್ದಾನೆ. ಸಹೋದರರೇ ನಾವು ಒಬ್ಬರಿಗೊಬ್ಬರು ಪ್ರೀತಿಸೋಣ ಯಾಕೆಂದರೆ ಪ್ರೀತಿಯು ದೇವರಿಂದ ಬಂದಿದೆ. ಪ್ರೀತಿಯಲ್ಲಿ ನೆಲೆಗೊಂಡವರು ದೇವರಿಂದ ಹುಟ್ಟಿದವರಾಗಿದ್ದಾರೆ ಮತ್ತು ದೇವರನ್ನು ಬಲ್ಲವರಾಗಿದ್ದಾರೆ, ಯಾರು ಪ್ರೀತಿಸುವುದಿಲ್ಲವೋ ಅವರು ದೇವರನ್ನು ತಿಳಿದವರಲ್ಲ. ಯಾಕೆಂದರೆ ದೇವರು ಪ್ರೀತಿ ಸ್ವರೂಪನು ಎಂದು ಬರೆಯುತ್ತಾನೆ. ದೇವರು ತನ್ನ ಒಬ್ಬನೇ ಮಗನನ್ನು ಲೋಕಕ್ಕೆ ಕಳುಹಿಸಿದನು. ನಾವು ಆತನ ಮುಖಾಂತರ ಜೀವಿಸಲೆಂದು

ಕಳುಹಿಸಿಕೊಟ್ಟನು. ಇದರಲ್ಲಿ ಆತನು ನಮ್ಮ ಮೇಲಿನ ಪ್ರೀತಿಯನ್ನು ಪ್ರಕಟಿಸಿದ್ದಾನೆ. ನಾವು ದೇವರನ್ನು ಪ್ರೀತಿಸುವ ಕಾರಣದಿಂದ ತನ್ನ ಮಗನನ್ನು ಕಳುಹಿಸಿಕೊಡಲಿಲ್ಲ. ಆದರೆ ಆತನು ನಮ್ಮನ್ನು ಪ್ರೀತಿಸುವುದರಿಂದ ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಯಜ್ಞವಾಗಲು ಆತನನ್ನು ಕಳುಹಿಸಿಕೊಟ್ಟನು. ಪ್ರಿಯ ವಿಶ್ವಾಸಿಗಳೇ ದೇವರು ನಮ್ಮನ್ನು ಇಷ್ಟು ಅಪಾರವಾಗಿ ಪ್ರೀತಿಸಿದ್ದರಿಂದ ನಾವೂ ಸಹಾ ಒಬ್ಬರಿಗೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ" ಎಲೆನ್ ಜಿ ವೈಟಮ್ಮನವರ 'ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್' ಪುಟ 547, 548.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕ್ರೈಸ್ತೀಯ ಜೀವನವು ಒಬ್ಬ ವಿಶ್ವಾಸಿಯು ಕ್ರಿಸ್ತನೊಡನೆ ವೈಯಕ್ತಿಕವಾಗಿ ಸಂಬಂಧ ಹೊಂದಿರುವುದೇ ಆಗಿದೆ. ಏನೇ ಆಗಲಿ ಇದು ಕ್ರೈಸ್ತ ಜೀವಿತದ ಒಂದೇ ಒಂದು ಅಂಶವಾಗಿದೆಯಷ್ಟೆ. ದೇವರು ನಮ್ಮನ್ನು ಸಮೂಹವಾಗಿ ನಡೆಸುತ್ತಾನೆಂದು ಜ್ಞಾಪಕ ಮಾಡಿಕೊಳ್ಳುವುದು ಮುಖ್ಯವಾಗಿದೆ ಏಕೆ? ಸಮೂಹಕ್ಕೆ ನನ್ನ ಜವಾಬ್ದಾರಿಯೇನು? ಸಮೂಹದಿಂದ ನಾನೇನು ನಿರೀಕ್ಷಿಸಬಹುದು?

2. ಒಂದು ಸಭೆಯಲ್ಲಿ ಸಹೋದರ ಸ್ನೇಹವು ಗಟ್ಟಿಯಾಗಿದೆ ಎಂಬುದಕ್ಕೆ ಇರುವ ಉತ್ತಮ ಗುರುತುಗಳೇನು? ಅವುಗಳ ಒಂದು ಪಟ್ಟಿಯನ್ನು ತಯಾರು ಮಾಡಲು ತರಗತಿಯಲ್ಲಿ ಸಿದ್ಧವಾಗಿರಿ.

3. ನಿಜವಾದ ಸಹೋದರ ಸ್ನೇಹವೆಂದರೆ ಏನು? ಅದರ ಗುಣಲಕ್ಷಣಗಳೇನು. ಕಾರಣಗಳು ಮತ್ತು ಫಲಿತಾಂಶಗಳೇನು? ಹುಸಿ ಸಹೋದರರ ಸ್ನೇಹದಿಂದ ಇದನ್ನು ಹೇಗೆ ಪ್ರತ್ಯೇಕ ಪಡಿಸಬಹುದು?